# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 878 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಜಾತಿವಾರು ಜನಗಣತಿಯನ್ನು ಆಯೋಗದಿಂದ ಸ್ವೀಕರಿಸಿ ಬಿಡುಗಡೆಗೊಳಿಸುವುದಾಗಿ ಹಾಗೂ ಅದರಲ್ಲಿ ಯಾವುದಾದರೂ ಸಮಸ್ಯೆಗಳಿದ್ದರೆ ಸರಿಪಡಿಸುವುದಾಗಿ ಹಲವಾರು ಬಾರಿ ಸರ್ಕಾರ ಘೋಷಿಸಿರುವುದು ನಿಜವೇ; | ಶ್ರೀ ಹೆಚ್. ಕಾಂತರಾಜ ನೇತೃತ್ವದ ಆಯೋಗವು ಸಿದ್ಧಪಡಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ವರದಿಯು ಸರ್ಕಾರಕ್ಕೆ ಸಲ್ಲಿಕೆ ಆಗಿರುವುದಿಲ್ಲ.<br><br>ಪ್ರಸ್ತುತ, ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ಸರ್ಕಾರದ ಕೋರಿಕೆಯಂತೆ ಆಯೋಗದ ವತಿಯಿಂದ ಕೈಗೊಳ್ಳಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ದತ್ತಾಂಶಗಳನ್ನು ಉಪಯೋಗಿಸಿಕೊಂಡು ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ. |
| ಆ | ಹಾಗಿದ್ದಲ್ಲಿ, ಆಯೋಗದ ಅಧ್ಯಕ್ಷರು ಜನಗಣತಿ ವರದಿ ಸಿದ್ಧವಿರುವುದಾಗಿ ತಿಳಿಸಿದ್ದು, ಸರ್ಕಾರ ಸ್ವೀಕರಿಸದೇ ಅವಧಿಯನ್ನು ವಿಸ್ತರಿಸುತ್ತಿರುವುದಕ್ಕೆ ಕಾರಣವೇನು; | ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗದ ಕಾರ್ಯಾವಧಿಯು ದಿನಾಂಕ: 26-11-2023 ರಂದು ಮುಕ್ತಾಯಗೊಳ್ಳಬೇಕಾಗಿತ್ತು.<br><br>ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ವರದಿಯ ದತ್ತಾಂಶಗಳನ್ನು ಉಪಯೋಗಿಸಿಕೊಂಡು ಶಿಫಾರಸ್ಸನ್ನು ಒಳಗೊಂಡ ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>ಸದರಿ ವರದಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸಲು ಕಾಲಾವಕಾಶವನ್ನು ಕೋರಿ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳು ದಿನಾಂಕ:23-11-2023ರ ಪತ್ರದಲ್ಲಿ ದಿನಾಂಕ: 31-01-2024ರ ವರೆಗೆ ಕಾರ್ಯಾವಧಿಯನ್ನು ವಿಸ್ತರಿಸಲು ಕೋರಿರುತ್ತಾರೆ. ಅದರಂತೆ, ಸರ್ಕಾರವು ಪ್ರಸ್ತುತ ಆಯೋಗದ ಕಾರ್ಯಾವಧಿಯನ್ನು ದಿನಾಂಕ:31-01-2024ರ ವರೆಗೆ ನೇಮಕಾತಿ ಮಾಡಿ ಆದೇಶಿಸಲಾಗಿರುತ್ತದೆ.<br><br>ಮುಂದುವರೆದು, ಪುನಃ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳು ವರದಿ ತಯಾರಿಸುವ ಕಾರ್ಯ ಪೂರ್ಣಗೊಳ್ಳದ ಕಾರಣ ದಿನಾಂಕ:22-01-2024ರ ಪತ್ರದಲ್ಲಿ ಮತ್ತೊಮ್ಮೆ ಆಯೋಗದ ಕಾರ್ಯಾವಧಿಯನ್ನು ದಿನಾಂಕ:29-02-2024ರ ವರೆಗೆ ವಿಸ್ತರಿಸಲು ಕೋರಿರುತ್ತಾರೆ. |

...2..

| | | |
|---|---|---|
| | | ಹಾಗಾಗಿ, ಪ್ರಸ್ತುತ ಆಯೋಗದ ಕಾರ್ಯಾವಧಿಯನ್ನು ಸರ್ಕಾರವು ದಿನಾಂಕ: 29-02-2024ರ ವರೆಗೆ ನೇಮಕಾತಿ ಮಾಡಿ ಆದೇಶಿಸಲಾಗಿರುತ್ತದೆ. |
| ಇ | ಒಂದು ವೇಳೆ ಮೇಲ್ವರ್ಗದ ಹಾಗೂ ಇನ್ನಿತರ ವರ್ಗದ ಸಮುದಾಯಗಳ ಒತ್ತಡದಿಂದ ಅದನ್ನು ಮುಂದೂಡುತ್ತಿರುವುದು ಇದರ ಉದ್ದೇಶವೇ? | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2015ರ ವರದಿಯ ದತ್ತಾಂಶಗಳನ್ನು ಉಪಯೋಗಿಸಿಕೊಂಡು ಶಿಫಾರಸ್ಸನ್ನು ಒಳಗೊಂಡ ವರದಿ ಪೂರ್ಣಗೊಳಿಸಲು ಆಯೋಗದ ಕಾಲಾವಧಿಯನ್ನು ವಿಸ್ತರಿಸಲು ದಿನಾಂಕ: 23-11-2023 ಹಾಗೂ 22-01-2024ರ ಪತ್ರಗಳಲ್ಲಿ ಕೋರಿರುತ್ತಾರೆ. ಅದರಂತೆ, ಸರ್ಕಾರವು ಪ್ರಸ್ತುತ ಆಯೋಗವನ್ನು ದಿನಾಂಕ: 29-02-2024ರ ವರೆಗೆ ನೇಮಕಾತಿ ಮಾಡಿ ಆದೇಶಿಸಲಾಗಿರುತ್ತದೆ. |

ಸಂಖ್ಯೆ: ಹಿಂವಕ 60 ಬಿಸಿಎ 2024

**(ಶಿವರಾಜ.ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.